**ಸಾಕ್ಷಿಗೆ ದಿನಾಂಕ:09-06-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. BPR ವಕೀಲರಿಂದ ::**

ದಾವಾ ಸ್ವತ್ತನ್ನು ಹಿಂದೆ ಪ್ರತಿವಾದಿ ಕುಟುಂಬದವರು ಖರೀದಿ ಮಾಡಿದ್ದು ಅದರ ಪೈಕಿ 20 ಗುಂಟೆ ಜಮೀನು ವಾದಿಗಳದೆಂದು ಹೇಳಿಕೊಂಡು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಕೆ ಎಂ ಶಂಕರಪ್ಪ ರವರು 1972 ರಲ್ಲಿ ದಾವಾ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎನ್ನುವ ಬಗ್ಗೆ ನನಗೆ ತಿಳಿದಿರುತ್ತದೆ, ಆದರೆ ಎಷ್ಟು ವಿಸ್ತೀರ್ಣದ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಹಿಂದಿನ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಅಷ್ಟಾಗಿ ಇರುವುದಿಲ್ಲ. ಹಣ್ಣೆ ಗ್ರಾಮದ ಸರ್ವೇ ನಂಬರ್ 49/3 ರಲ್ಲಿ ಎಷ್ಟು ಜನ ಹಿಸ್ಸಾದಾರರು ಸ್ವಾಧೀನಾನುಭದಲ್ಲಿ ಇರುತ್ತಾರೆ ಎಂದರೆ ಪ್ರತಿವಾದಿಗಳ ಕುಟುಂಬದವರು ಮಾತ್ರ ಸ್ವಾಧೀನದಲ್ಲಿ ಇರುತ್ತಾರೆ ಎಂದು ನುಡಿದಿರುತ್ತಾರೆ. 1972 ರ ಕ್ರಯಪತ್ರದ ಆಧಾರದಲ್ಲಿ ಸರ್ವೇ ನಂಬರ್ 49/3 ರಲ್ಲಿ ವಾದಿಗಳ ಕುಟುಂಬದವರು 2 ಎಕರೆ 14 ಗುಂಟೆ ಜಮೀನು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಹೇಳಿರುವ ಸರ್ವೇ ನಂಬರ್ 47/3 ರಲ್ಲಿ 1 ಎಕರೆ 18 ಗುಂಟೆ ಜಮೀನನ್ನು ನನ್ನ ಹೆಂಡತಿ ಕ್ರಯಪತ್ರದ ಅಡಿ 2000-01 ರಲ್ಲಿ ಖರೀದಿ ಮಾಡಿರುತ್ತಾರೆ. ಖರೀದಿಯ ಸಮಯದಲ್ಲಿ ನಮ್ಮ ಜಮೀನನ್ನು ಅಳತೆ ಮಾಡಿಸಿಕೊಂಡು ಕ್ರಯಪತ್ರದಲ್ಲಿ ತೋರಿಸಿರುವ ವಿಸ್ತೀರ್ಣದಷ್ಟು ಜಾಗದಲ್ಲಿ ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸರಿ. ನಾವು ನಮ್ಮ ಜಮೀನಿನ ಸ್ವಾಧೀನದಲ್ಲಿ ಇದಂತಯೇ 1972 ರ ಕ್ರಯಪತ್ರದ ಆಧಾರದಲ್ಲಿ ದಾವಾ ಸ್ವತ್ತಿನಲ್ಲಿ ವಾದಿಯ ಕುಟುಂಬದವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳು ಅವರ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ, ಯಾರಿಂದ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಕುಟುಂಬದವರು 1 ಎಕರೆ 30 ಗುಂಟೆ ಜಮೀನು ಅನ್ನು ಮಾರಾಟ ಮಾಡಲು ಕುಟುಂಬದವರಿಗೆ ನನ್ನ ಪ್ರಕಾರ ಹಕ್ಕು ಇತ್ತು. ಸರ್ವೇ ನಂಬರ್ 49/3 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಹಣ್ಣೆ ಗ್ರಾಮದ ಸರ್ವೇ ನಂಬರ್ 49/3 ರ ಒಟ್ಟು ವಿಸ್ತೀರ್ಣ

5 ಎಕರೆ 8 ಗುಂಟೆ ಇದ್ದು ಅದನ್ನು ಬಿಟ್ಟು 4 ಗುಂಟೆ ಖರಾಬು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಪೈಕಿ 2 ಎಕರೆ 14 ಗುಂಟೆ ಜಮೀನು ಅನ್ನು ವಾದಿಗಳ ಕುಟುಂಬದವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರದಲ್ಲಿ 1973-74 ರಲ್ಲಿ ಸಾವಿತ್ರಮ್ಮ ಎನ್ನುವವರು ಸದರಿ ಸರ್ವೇ ನಂಬರ್ ನಲ್ಲಿ 1 ಎಕರೆ 20 ಗುಂಟೆ ಜಮೀನು ಅನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟಗಳ ನಂತರದಲ್ಲಿ ಸರ್ವೇ ನಂಬರ್ 49/3 ರಲ್ಲಿ ಪ್ರತಿವಾದಿಗಳ ಕುಟುಂಬದವರಿಗೆ ಕೇವಲ 1 ಎಕರೆ 10 ಗುಂಟೆ ಜಮೀನು ಮಾರಾಟ ಮಾಡಲು ಅಧಿಕಾರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 49/3 ರಲ್ಲಿ ಪ್ರತಿವಾದಿಗಳ ಕುಟುಂಬದವರು ಇಲ್ಲಿಯವರೆಗೆ 1 ಎಕರೆ 30 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ಅವರ ಚಿತ್ತಾವಣೆ ಮೇರೆಗೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಸಂಬಂಧಿಕರು ಎಂದರೆ ಸಾಕ್ಷಿಯು ದೂರದ ಸಂಬಂಧಿ ಎಂದು ನುಡಿಯುತ್ತಾರೆ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: